ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ನ್ಯಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

(ಅ) ಪುನರ್ವಸತಿ ನಿವೇಶನವನ್ನು ಗೊತ್ತುಪಡಿಸಲಾಗಿದೆ ಮತ್ತು ಭೂ ಸ್ವಾಧೀನ ನಡವಳಿಕೆಯನ್ನು ಪ್ರಾರಂಭಿಸಲಾಗಿದೆ.

ನವನಗರ ಯೋಜನೆಯ ಕಾರ್ಯವನ್ನು ಶ್ರೀ ಚಾರ್ಲ್ಸ್ ಕೊರಿಯಾ ವಾಸ್ತುಶಿಲ್ಪಿ. ಬಾಂಬೆ ಇವರಿಗೆ ಒಪ್ಪಿಸಲಾಗಿದೆ. ಮತ್ತು ನಿಗದಿತ ವೇಳೆಯಲ್ಲಿ ಮುಳುಗಡೆಗೆ ಎಡೆಯಾದ ಜನರನ್ನು ಬೇರೆ ಕಡೆಗೆ ವರ್ಗಾಯಿಸಲು ಶಿಫಾರಸು ಮಾಡಲಾಗಿದೆ.

(ಆ) ನಿವೇಶನ ರಹಿತರಿಗೆ ನವನಗರದಲ್ಲಿ ನಿವೇಶನವನ್ನು ಹಂಚುವುದರಿಂದ ಮತ್ತು ಅಭಿವೃದ್ಧಿ ಕಾರ್ಯಕ್ರಮವನ್ನು ಕೈಕೊಳ್ಳುವ ಕಾರಣ ಸದರಿ ಪ್ರಶ್ನೆಯು ಉದ್ಭವಿಸಲಾರದು.

(ಇ) ಉದ್ದಿಮೆದಾರರಿಗೆ ನಿವೇಶನವನ್ನು ನವನಗರದಲ್ಲಿ ವಿಂಗಡಿಸಲಾಗುವುದು ಮತ್ತು ಪ್ರತ್ಯೇಕವಾದ ಉದ್ದಿಮೆಯ ಕ್ಷೇತ್ರವನ್ನು ಹೊಸನಗರದಲ್ಲಿ ನಿರ್ಮಿಸಲಾಗಿದೆ. ಹಾಗೂ ಇದರಿಂದ ತೊಂದರೆಗೀಡಾದ ಮತ್ತು ಸ್ಥಳಾಂತರಿಸಲಾದ ಉದ್ದಿಮೆದಾರರ ಪರಿಸ್ಥಿತಿ ಕೂಡ ಸುಧಾರಿಸಬಹುದು.

(ಈ) ೧೯೮೫–೮೬ನೇ ಇಸವಿಗೆ ನಿಗದಿ ಪಡಿಸಿದ ಹಣ . ರೂ. ೨ ಕೋಟಿ
ಜುಲೈ ೧೯೮೫ರ ಅಂತ್ಯದ ವರೆಗಿನ ವೆಚ್ಚ ; ರೂ. ೭.೫೦ ಲಕ್ಷಗಳು

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ತೀರ್ಥರಾಮೇಶ್ವರಸ್ವಾಮಿ ದೇವಾಸ್ಥಾನದ ಸುತ್ತಲು ಕ್ವಾರೀ ಮಾಡುವುದನ್ನು ನಿಷೇದಿಸುವ ಬಗ್ಗೆ

೮೫೫. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಬಾರಿ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

(ಅ) ಅಮ್ಮಸಂದ್ರ ಸಿಮೆಂಟ್ ಕಾರ್ಖಾನೆಗೆ ಸುಣ್ಣದ ಕಲ್ಲನ್ನು ತೆಗೆಯಲು ಕೊಟ್ಟಿರುವ ಪರವಾನಿಗೆಯಿಂದ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂದಿಕೆರೆ ಹೋಬಳಿಯಲ್ಲಿರುವ ತೀರ್ಥರಾಮೇಶ್ವರ ದೇವಸ್ಥಾನ ಹಾಗೂ ಅದರ ಪಕ್ಕದಲ್ಲಿರುವ ಪವಿತ್ರ ಗಂಗೆಗೆ ಧಕ್ಕೆ ಉಂಟಾಗಿರುವುದೂ ಸರ್ಕಾರದವರ ಗಮನಕ್ಕೆ ಬಂದಿದೆಯೆ,

(ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಕೊಳ್ಳುವ ಕ್ರಮವೇನು ?

ಶ್ರೀ ಜೆ. ಎಸ್. ದೇಶಪಾಂಡೆ (ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

(ಅ) ಈ ಬಗ್ಗೆ ಸರ್ಕಾರಕ್ಕೆ ಮನವಿಗಳು ಬಂದಿವೆ

(ಆ) ಸರ್ಕಾರವು ಈಗಾಗಲೇ ತಾತ್ಕಾಲಿಕವಾಗಿ ದೇವಸ್ಥಾನದಿಂದ ೨ ಕಿ.ಮೀ. ದೂರದ ಸರಹದ್ದಿನಲ್ಲಿ ಯಾವುದೇ ಗಣಿ ಕೆಲಸ ಪ್ರಾರಂಭಿಸದಂತೆ ತಡೆಯಾಜ್ಞೆ ನೀಡಿದೆ. ದೇವಸ್ಥಾನದ ಸುತ್ತಲೂ ಎಷ್ಟು ಪ್ರದೇಶ ಬಿಡುವ ಅವಶ್ಯಕತೆ ಇದೆ ಎಂಬ ವಿಷಯವನ್ನು ಸರ್ಕಾರವು ಪುನಃ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದಿಟ್ಟಿದ್ದೇನೆ.

ಅಧ್ಯಕ್ಷರು.—ಉತ್ತರಗಳ ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

ಸಭೆಯಲ್ಲಿ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಚಿವರು).—ಮಾನ್ಯ ಜೆ. ಪೆಟ್ ಪಟೇಲರ ಹೆಸರಿನಲ್ಲಿರುವ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.